**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ಶಿವಮೊಗ್ಗದಲ್ಲಿರುವ ಶರಾವತಿ ಭೂಗತ ವಿದ್ಯುತ್ ಯೋಜನೆಗಿಂತ ಅತ್ಯುತ್ತಮ ಯೋಜನೆಯೊಂದನ್ನು ಪಕ್ಕದ ತಮಿಳುನಾಡು ಸರ್ಕಾರ ಅಳವಡಿಸಿಕೊಳ್ಳುತ್ತಿದ್ದು, ಕರ್ನಾಟಕ ಸರ್ಕಾರ ಇಂತಹ ಯೋಜನೆಯನ್ನು ಅಳವಡಿಸಿಕೊಂಡು ಕಾರ್ಯರೂಪಕ್ಕೆ ತರಲು ನಿರ್ಲಕ್ಷ್ಯ ವಹಿಸಿರುವ ವಿಚಾರದ ಬಗ್ಗೆ ದಿನಾಂಕ:17.03.2025 ರ ಹೊಸದಿಗಂತ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಶರಾವತಿ ಭೂಗತ ವಿದ್ಯುತ್ ಯೋಜನೆಯಿಂದ ಸುಮಾರು 350 ಎಕರೆ ಪಶ್ಚಿಮ ಘಟ್ಟದ ಅರಣ್ಯ ನಾಶ ಆಗಲಿದೆ ಎಂದು ಅಂದಾಜಿಸಲಾಗಿದ್ದು, ಇದರ ಜೊತೆಗೆ ಶರಾವತಿ ಅಭಯಾರಣ್ಯದಲ್ಲಿನ ಸಸ್ಯ ಸಂಪತ್ತು, ವಿವಿಧ ಪ್ರಬೇಧಗಳು ಅಳಿವಿನ ಅಂಚಿನ ಪ್ರಾಣಿಗಳಿಗೂ ಕುತ್ತು ಬರಲಿದೆ. ಅಲ್ಲದೆ, ಈ ಯೋಜನೆಗೆ ವ್ಯಾಪಕ ವಿರೋಧವೂ ಇದೆ.

ಆದರೆ ಪಕ್ಕದ ತಮಿಳುನಾಡು ಸರ್ಕಾರವು ಬೇಡಿಕೆ ಸಮಯದಲ್ಲಿ ಬೇಕಾಗುವ ವಿದ್ಯುತ್ತನ್ನು ಸಂಗ್ರಹಿಸಿಟ್ಟು ಸರಬರಾಜು ಮಾಡಲು ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಂ (ಬಿಇಎಸ್‌ಎಸ್) ಯೋಜನೆಯೊಂದನ್ನು ರೂಪಿಸಿದ್ದು, ಕೇಂದ್ರ ಸರ್ಕಾರದ ಸಹಯೋಗದಲ್ಲಿ ಅಳವಡಿಸುತ್ತಿದೆ. ತಮಿಳುನಾಡಿನ ಗ್ರೀನ್ ಎನರ್ಜಿ ಕಾರ್ಪೋರೇಷನ್ ಇದನ್ನು ಕಾರ್ಯಗತ ಮಾಡುತ್ತಿದ್ದು, ಕೇಂದ್ರ ಇಂಧನ ಇಲಾಖೆ ಇದಕ್ಕೆ ಶೇ.30 ರಷ್ಟು ಧನಸಹಾಯ ಮಾಡುತ್ತಿದೆ. ಈ ಯೋಜನೆಯಲ್ಲಿ ಸೌರಶಕ್ತಿ ಮತ್ತು ಗಾಳಿಯ ಮೂಲಕ ವಿದ್ಯುತ್ ಉತ್ಪಾದನೆ ಮಾಡಿ 500 ರಿಂದ 1000 ಮೆಗಾವ್ಯಾಟ್ ಸಾಮರ್ಥ್ಯದ ಬ್ಯಾಟರಿಗಳನ್ನು ವಿವಿಧ ಸಂಗ್ರಹ ಘಟಕಗಳಲ್ಲಿ ಶೇಖರಿಸಿ, ಬಳಿಕ ಹೆಚ್ಚು ಬೇಡಿಕೆ ಸಮಯದಲ್ಲಿ ಪೂರೈಕೆ ಮಾಡಲಾಗುತ್ತಿದೆ. ಇದರಿಂದ ವಿದ್ಯುತ್ ಖರೀದಿ ವೆಚ್ಚ ಉಳಿತಾಯವಾಗುತ್ತದೆ.

ಆದರೆ ನವೀಕರಿಸಿ ಶೇಖರಿಸಬಹುದಾದ ವಿದ್ಯುತ್ ಮರುಬಳಕೆಯ ಈ ಯೋಜನೆಯನ್ನು ಕರ್ನಾಟಕ ಸರ್ಕಾರ ಕೇಂದ್ರದ ಸಹಾಯಧನದೊಂದಿಗೆ ಕೈಗೆತ್ತಿಕೊಳ್ಳಲು ನಿರ್ಲಕ್ಷ್ಯ ವಹಿಸಿರುವುದು ಅನುಮಾನಕ್ಕೆ ಎಡಮಾಡಿದ್ದು, ಪರಿಸರ ಹಾಗೂ ವನ್ಯಜೀವಿ ನೆಲೆಯನ್ನು ನಾಶ ಮಾಡದೇ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಂ ಅಳವಡಿಸುವ ಈ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಇಂಧನ ಸಚಿವರ ಹೇಳಿಕೆ.

* * * * *

**ಉತ್ತರ:**

2000 MW ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಶರಾವತಿ ಕಣಿವೆ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದ್ದು, ಯೋಜನೆಗೆ ಕೆಳ ಮಟ್ಟದಲ್ಲಿ ಗೇರುಸೊಪ್ಪ ಹಾಗೂ ಮೇಲ್ಮಟ್ಟದಲ್ಲಿ ತಳಕಳಲೆ ಜಲಾಶಯಗಳು ಈಗಾಗಲೇ ಅಸ್ತಿತ್ವದಲ್ಲಿವೆ. ಅತ್ಯಂತ ಕಡಿಮೆ ಅರಣ್ಯ ಭೂಮಿಯ ಅಗತ್ಯತೆ 134 ಎಕರೆ ಇದ್ದು (54.155 ಹೆಕ್ಟೇರ್), ಬಹುಪಾಲು ರಚನೆಗಳು ಸುರಂಗದ ಒಳಗಿದ್ದು, ಹೀಗಾಗಿ ಭೂಮಿಯ ಮೇಲಿನ ಅರಣ್ಯ ಪ್ರದೇಶಕ್ಕೆ ಕಡಿಮೆ ತೊಡಕು ಉಂಟಾಗುವುದು. ಯೋಜನೆಗೆ ಅಗತ್ಯವಿರುವ ಒಟ್ಟು ಭೂಮಿ (ಅರಣ್ಯೇತರ ಸೇರಿ) 350 ಎಕರೆ (143 ಹೆಕ್ಟೇರ್).

BESS ಜೊತೆಗೆ, ತಮಿಳುನಾಡು ಸಹ PSP ಗಳನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಯಗತಗೊಳಿಸಲು ಪ್ರಸ್ತಾಪಿಸುತ್ತಿದೆ ಹಾಗೂ ತಮಿಳುನಾಡು ಸರ್ಕಾರವು 1987 ರಲ್ಲಿ 400 ಮೆಗಾವ್ಯಾಟ್ ಕಡಂಪರೈ ಪಿಎಸ್‌ಪಿಯನ್ನು ಅನುಷ್ಠಾನಗೊಳಿಸಿದೆ ಹಾಗೂ ನೀಲಗಿರಿಯಲ್ಲಿ 500 ಮೆಗಾವ್ಯಾಟ್ ಕುಂದ ಪಿಎಸ್‌ಪಿ ಪೂರ್ಣಗೊಳ್ಳುವ ಹಂತದಲ್ಲಿದೆ. ತಮಿಳುನಾಡು ಸರ್ಕಾರವು ನೀಲಗಿರಿಯಲ್ಲಿ 1000 ಮೆಗಾವ್ಯಾಟ್ ಸಿಲ್ಲಹಲ್ಲಾ ಪಿಎಸ್‌ಪಿ ಮತ್ತು 1000 ಮೆಗಾವ್ಯಾಟ್ ಅಪ್ಪರ್ ಭವಾನಿ ಪಿಎಸ್‌ಪಿಯನ್ನು ಜಾರಿಗೆ ತರಲು ಯೋಜಿಸುತ್ತಿದೆ, ಇದರ ಜೊತೆಗೆ ಅವರು 22.08.2024 ರಂದು ಪಂಪ್ಡ್ ಸ್ಟೋರೇಜ್ ನೀತಿಯನ್ನು ಬಿಡುಗಡೆ ಮಾಡಿದ್ದಾರೆ, ಇದು ಇಂಧನ ಸಂಗ್ರಹಣೆಯ ಅಗತ್ಯಗಳನ್ನು ತಗ್ಗಿಸಲು ತಮಿಳುನಾಡು ರಾಜ್ಯದಲ್ಲಿ ಹೊಸ ಪಿಎಸ್‌ಪಿಗಳನ್ನು ಸ್ಥಾಪಿಸಲು ಖಾಸಗಿ ಭಾಗವಹಿಸುವಿಕೆಯನ್ನು ಉತ್ತೇಜಿಸುತ್ತದೆ.

ಪ್ರಸ್ತಾವಿತ ಶರಾವತಿ ಪಿಎಸ್‌ಪಿ ಜೊತೆಗೆ ಕರ್ನಾಟಕ ಸರ್ಕಾರವು ಕಡಿಮೆ ಅವಧಿ ಇಂಧನ ಸಂಗ್ರಹಣೆ ಅಗತ್ಯಗಳನ್ನು ಪೂರೈಸಲು ಬಿಇಎಸ್‌ಎಸ್ ಅನ್ನು 30% ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಕಾರ್ಯಗತಗೊಳಿಸಲು ಯೋಜಿಸುತ್ತಿದೆ ಹಾಗೂ ದೀರ್ಘಾವಧಿಯ ಇಂಧನ ಸಂಗ್ರಹಣೆ ಅಗತ್ಯಗಳಿಗಾಗಿ ಪಿಎಸ್‌ಪಿಗಳು ಅನಿವಾರ್ಯ.

ಸಂಖ್ಯೆ: ಎನರ್ಜಿ 80 ಇಬಿಎಸ್ 2025

(ಕೆ.ಜೆ.ಜಾರ್ಜ್) 20/3/25
ಇಂಧನ ಸಚಿವರು